# ವಿಶ್ವಾಸಘಾತ

■ ಹಿಂದಿ ಮೂಲ: **ಸುಷಮಾ ಮುನೀಂದ್ರ**
■ ಕನ್ನಡಕ್ಕೆ: **ಎಚ್.ಎಂ. ಕುಮಾರಸ್ವಾಮಿ**
ಕಲೆ: ಸಂತೋಷ್ ಸಸಿಹಿತ್ಲು

ಪುರುಷ ಪ್ರಭುತ್ವದ ವಿರುದ್ಧ ಧ್ವನಿಯೆತ್ತಿದ ಪ್ರಥಮ ನಾರಿಯೇ ಕೈಕೆಯಿ ಎಂದೆನಿಸುತ್ತದೆ.

ಕೈಕೆಯಿಯ ಮಹಲಿನಷ್ಟು ಸುಂದರ, ಭವ್ಯವಾದ ಮಹಲು ಕೌಸಲ್ಯಾ ಬಳಿಯಾಗಲಿ, ಸುಮಿತ್ರಾಳ ಬಳಿಯಾಗಲಿ ಇರಲಿಲ್ಲ. ಇಂದು ಅಂತಹ ಭವ್ಯಮಹಲು ತನ್ನ ಹೊಳಪನ್ನು ಕಳೆದುಕೊಂಡು ಮಸುಕಾಗಿಬಿಟ್ಟಿದೆ. ಕೈಕೆಯಿ 'ಕೋಪಭವನ'ದಲ್ಲಿದ್ದಾಳೆ. ವಿಶ್ವಾಸಾಘಾತ ಬೇಗೆಯಿಂದ ಅವಳ ಸರ್ವಾಂಗಗಳು ಬೇಯುತ್ತಿವೆ. ಕೈಕೇಯ ದೇಶದ ರಾಜ ಅಶ್ವಪತಿಯ ಪ್ರೀತಿಯ ಏಕೈಕ ಪುತ್ರಿ ಕೈಕೆಯಿ. ಏಳು ಜನ ಸಹೋದರರ ಗೌರವಾನ್ವಿತ ತಂಗಿ ಕೈಕೆಯಿಗೆ ಗೌರವ ಹಾಗೂ ಸ್ವಾಭಿಮಾನದಿಂದ ಬದುಕುವುದು ಮಾತ್ರ ಗೊತ್ತು. ಅಪಮಾನ, ತಿರಸ್ಕಾರ, ಅಗೌರವ ಮುಂತಾದವು ಅವಳಿಂದ ಹರಿದಾರಿ ದೂರ. ನಿತ್ಯವೂ ಅವಳ ಸ್ವಭಾವಕ್ಕೆ ಪೂರಕವಾದ ವಾತಾವರಣವೇ ದೊರೆಯುತ್ತಿದ್ದುದರಿಂದ ನಕಾರಾತ್ಮಕ ಅಥವಾ ವೈಫಲ್ಯವೇನೆಂದು ಕೈಕೆಯಿಗೆ ತಿಳಿಯಲೇ ಇಲ್ಲ. ಮನೋನುಕೂಲವಾದ ಪರಿಸ್ಥಿತಿ ಸಹ ಇದ್ದ ಕಾರಣ ದೃಶ್ಯದೊಳಗಣ ಅದೃಶ್ಯ ಚಿತ್ರವನ್ನು ಪರಿಭಾವಿಸುವ ಅವಶ್ಯಕತೆ ಅವಳಿಗೆ ಇರಲಿಲ್ಲ. ಪಳಗಿದ ವ್ಯವಹಾರ, ಕುಶಲರಾಣಿಯ ಹಾಗೆ ತನ್ನ ವಿಚಾರದಲ್ಲಿ ತಲ್ಲೀನಳಾಗಿದ್ದ ಆಕೆಗೆ ರಾಜಮಹಲಿನಲ್ಲೊಂದು ಷಡ್ಯಂತ್ರ ನಡೆದಿದೆ ಎಂದು ತಿಳಿಯಲೇ ಇಲ್ಲ. ತಾನು ಚಕ್ರವರ್ತಿ ಸಾಮ್ರಾಟ ದಶರಥನ ಪ್ರೀತಿಪಾತ್ರಳಾದ ರಾಣಿ ಎಂಬ ಅಹಂಕಾರ ಅವಳನ್ನು ಯೋಚಿಸದಂತೆ ನಿಬಂಧಿಸಿತ್ತು. ಹಾಗಾಗಿ ಕೂಟನೀತಿ ಷಡ್ಯಂತ್ರವನ್ನು ಅನುಮಾನಿಸುವ ವಿವೇಕ ಅವಳಲ್ಲಿ ಇಲ್ಲವೇ ಇಲ್ಲ ಎಂಬುದು, ಕಿಂಚಿತ್ತೂ ಇಲ್ಲ ಎಂಬುದು ಇಂದು ಸ್ಪಷ್ಟವಾಗಿ ಹೋಗಿದೆ. ಆಕೆಗಿಂತಲೂ ಅತ್ಯಂತ ಚತುರೆ, ನಿಪುಣೆ, ಎಚ್ಚರಿಕೆಯ ತಾಯಿ ಸದೃಶಳಾದ ಮಂಥರೆ ಇದ್ದಾಳೆ.

ನಗರದ ವೈಭವ, ಅಲಂಕಾರ ಮತ್ತು ಪ್ರಜೆಗಳ ಸಂತಸ, ಉಲ್ಲಾಸಗಳನ್ನು ಹಾಗೂ ಅರಮನೆಯ ಬಿರುಸಿನ ಚಟುವಟಿಕೆಗಳನ್ನು ಗಮನಿಸಿದ ಮಂಥರೆ ರಾಮನ ರಾಜ್ಯಾಭಿಷೇಕ ನಡೆಯಲಿದೆ ಎಂದು ಸ್ಪಷ್ಟವಾಗಿ ಅರ್ಥಮಾಡಿಕೊಂಡಳು. ಕೈಕೆಯಿಗೆ ತಾಯಿಯ ಮಮತೆ ನೀಡಿದವಳು ದಾಸಿ ಮಂಥರಾ ತಾನೇ! ಯಾವುದೋ ಒಂದು ಕಾರಣಕ್ಕಾಗಿ ಕುಪಿತಗೊಂಡ ರಾಜ ಪಶುಪತಿ ತನ್ನ ಪತ್ನಿಯನ್ನು ಮಹಲಿನಿಂದ ಹೊರಗಟ್ಟಿದ ಮೇಲೆ ಬಾಲಿಕೆ ಕೈಕೆಯಿಯನ್ನು ತಾಯಿಯಂತೆಯೇ ಪೊರೆದಳು. ಮಗು ಕೈಕೆಯಿಯ ಲಾಲನೆ, ಪಾಲನೆಯ ಎಲ್ಲಾ ಭಾರವನ್ನು ಹೊತ್ತು ಮಗಳಂತೆ ಪೋಷಿಸಿದ ಮಂಥರೆಗೆ ಕೈಕೆಯಿಯನ್ನು ಬಿಟ್ಟಿಲಾರದ ಸಂಕಟ ಕಾಡತೊಡಗಿದಾಗ ತನ್ನೆಲ್ಲ ಮನೆ–ಮಠ ತೊರೆದು ಕೈಕೆಯಿಯೊಂದಿಗೆ ಅಯೋಧ್ಯೆ ಸೇರಿದಳು. ಇಂದು ಆಕೆಯೇ ರಾಜ್ಯಾಭಿಷೇಕದ ಸಂಗತಿಯನ್ನು ಗುಪ್ತವಾಗಿಟ್ಟ ಮರ್ಮವನ್ನು ಕೈಕೆಯಿಗೆ ಅರುಹಿದಳು. ಅಪಮಾನ ಮತ್ತು ತಿರಸ್ಕಾರವಷ್ಟೇ ಅಲ್ಲ, ಬದಲಾಗಿ ಅವಳ ವಿಶ್ವಾಸಕ್ಕೆ ಆದ ಆಘಾತವನ್ನು ಎಳೆಎಳೆಯಾಗಿ ಬಿಡಿಸಿ ಅರುಹಿದಳು. ಮೊದಲಿಗೆ ಕೈಕೆಯಿಗೆ ಇದು ವಿಶ್ವಾಸಘಾತುಕತನ ಎಂದೆನಿಸಲಿಲ್ಲ. ನಿಧಾನವಾಗಿ ಅರಿವಾದಾಗ ಅವಳ ಅಂತರ್ಯದಲ್ಲಿನ ನಂಬಿಕೆ, ವಿಶ್ವಾಸ ಕಮರಿಹೋಗಿತ್ತು. ಎಂತಹ ಮೋಸ! ಎಂತಹ ಕಪಟ! ಇದೆಂತಹ ವಿಶ್ವಾಸಘಾತ!

ಕೈಕೆಯಿ ವಿಶ್ವಾಸಘಾತದ ವೇದನೆ, ಆತ್ಮಗೌರವಕ್ಕೊದಗಿದ ಚ್ಯುತಿ, ಅವಗಣನೆಯಿಂದುಂಟಾದ ಕ್ಷೋಭೆಯಿಂದ ಒದ್ದಾಡುತ್ತಿದ್ದಾಳೆ. ಇತ್ತ ಆಕೆ ಮುಂದಿಟ್ಟಿದ್ದ ಎರಡು ವರಗಳಿಂದ ಉದ್ಭವಿಸಬಹುದಾದ ದುಷ್ಪರಿಣಾಮದ ಬಗ್ಗೆ ವಿಚಾರ ಮಾಡಿದ ದಶರಥ ದೀನಾವಸ್ಥೆಯಿಂದ ನೆಲಕ್ಕುರಳಿದ್ದಾನೆ.

ತನ್ನೆದುರು ಪಾರ್ಶ್ವವಾಯು ಮುದ್ರೆಯಲ್ಲಿ ಬಿದ್ದಿರುವ ದಶರಥನನ್ನು ಕೈಕೆಯಿ ದಯಾಪೂರ್ಣ ದೃಷ್ಟಿಯಿಂದ ನೋಡಿದಳು. ಆ ಕ್ಷಣಕ್ಕೆ ಆತ ಚಕ್ರವರ್ತಿ, ಸಾಮ್ರಾಟನಂತೆ ಕಾಣಿಸುತ್ತಿರಲಿಲ್ಲ. ಅಂದು ಇದೇ ರಾಜನ ಕೀರ್ತಿಯನ್ನು ಕೇಳಿ ತಿಳಿದು ಅಶ್ವಪತಿ ತನ್ನ ಕೈಕೇಯ ದೇಶಕ್ಕೆ ಬರುವಂತೆ ಆಮಂತ್ರಣ ನೀಡಿದ್ದ. ಆತನನ್ನು ಗೌರವಾನ್ವಿತ ಅತಿಥಿಯೆಂದು ಭಾವಿಸಿ ಆತನ ಸತ್ಕಾರದ ಸಂಪೂರ್ಣ ಜವಾಬ್ದಾರಿಯನ್ನು ಕೈಕೆಯಿ ಸ್ವತಃ ತಾನೇ ವಹಿಸಿಕೊಂಡಿದ್ದಳು. ಆಕೆಯ ರೂಪ, ಗುಣ, ಸೌಂದರ್ಯದ ಬಗ್ಗೆ ಮೋಹಿತನಾದ ಆತ ವಿವಾಹ ಪ್ರಸ್ತಾಪವನ್ನು ಮುಂದಿಟ್ಟಿದ್ದ. ಆತ

**ಕೈಕೆಯಿ ಹೇಳುವುದಾದರೂ ಏನು? ಭರತನು ನನ್ನನ್ನು ದೂರ ಮಾಡುತ್ತಾನೆ. ಆದರೆ ನಾನು ರಾಮನಿಗೆ ವಚನ ನೀಡಿದ್ದೇನೆ.**
**ಕೈಕೆಯಿ ಮೌನವಹಿಸಿದಳು. ದಶರಥ ಪರಿಪರಿಯಾಗಿ ವಿನಂತಿಸಿದ.**
**ಕೈಕೆಯಿ ಮೌನ.**
**ದಶರಥ ದ್ವೇಷ ಮತ್ತು ತಿರಸ್ಕಾರದಿಂದ ತಾನು ಹೇಳಬೇಕೆನಿಸಿದ್ದೆಲ್ಲವನ್ನೂ ಹೇಳತೊಡಗಿದ.**

